ಇಸ್ಲಾಮೀ ದೃಷ್ಟಿಕೋನದಲ್ಲಿ

14

ಪ್ರಾಣಿಹಕ್ಕುಗಳು



مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಇಸ್ಲಾಮೀ ದೃಷ್ಟಿಕೋನದ ಪ್ರಕಾರ ಈ ಜಗತ್ತಿನಲ್ಲಿರುವ ಪ್ರಾಣಿ, ಪಕ್ಷಿ, ಕೀಟ ಮುಂತಾದ ಜೀವರಾಶಿಗಳು ಸೇರಿದಂತೆ ಎಲ್ಲಾ ಚರಾಚರಗಳೂ ಏಕೈಕನೂ ಅದ್ವಿತೀಯನೂ ಆದ ಅಲ್ಲಾಹನ ಸೃಷ್ಟಿಗಳಾಗಿವೆ. ಅವುಗಳ ಪೈಕಿ ಮನುಷ್ಯ ಸೃಷ್ಟಿಯು ಉತ್ಕೃಷ್ಟವೂ ಗೌರವಾನ್ವಿತವೂ ಆಗಿದೆ. ಮನುಷ್ಯೇತರ ಸೃಷ್ಟಿಗಳನ್ನು ಎರಡರಲ್ಲೊಂದು ಉದ್ದೇಶದೊಂದಿಗೆ ಸೃಷ್ಟಿಸಲಾಗಿದೆ. ಒಂದೋ ಅವು ನೇರವಾಗಿ ಮನುಷ್ಯನಿಗೆ ಪ್ರಯೋಜನಪಡುವ ವಿಧದಲ್ಲಿ. ಅಥವಾ ಅವುಗಳ ಮೂಲಕ ಮನುಷ್ಯರು ಅಲ್ಲಾಹನ ಅಸ್ತಿತ್ವ ಮತ್ತು ಏಕತ್ವವನ್ನು ಕಂಡುಕೊಳ್ಳುವುದಕ್ಕಾಗಿ. ಕುರ್‌ಆನ್‌ನ 16/5; 16/8; 16/79; 24/45 ಮುಂತಾದ ಅನೇಕ ವಚನಗಳು ಈ ವಾಸ್ತವಿಕತೆಯನ್ನು ಸೂಚಿಸುತ್ತವೆ.

ಮನುಷ್ಯರಂತೆಯೇ ಪ್ರಾಣಿಗಳಿಗೂ ಕೂಡ ನೋವು, ದುಃಖ, ಒಂಟಿತನ, ಸಂತೋಷ, ಆಹ್ಲಾದ ಮುಂತಾದ

ಭಾವನೆಗಳಿವೆ. ಅವು ಸಣ್ಣ ಪ್ರಮಾಣದಲ್ಲಾದರೂ ಆಶಯ ವಿನಿಮಯ, ಪ್ರೇಮ, ಸಲ್ಲಾಪ, ಕುಟುಂಬ ವಾತ್ಸಲ್ಯ ಮುಂತಾದವುಗಳನ್ನು ಪ್ರಕಟಿಸುತ್ತವೆ. ಸಹಜೀವಿಗಳು ಕಷ್ಟಪಡುವಾಗ ಅವುಗಳಿಗೆ ನೆರವಾಗುವ ತ್ಯಾಗ ಮನೋಭಾವ (altruism) ಪ್ರಾಣಿಗಳಿಗೆ ಇದೆಯೆಂದು ಪ್ರಾಣಿವರ್ತನೆಗಳ ಬಗೆಗಿನ ಆಧುನಿಕ ಅಧ್ಯಯನ ಶಾಸ್ತ್ರ Ethology ಹೇಳುತ್ತದೆ. ಆದರೆ ಈ ವಿಷಯವನ್ನು ಕುರ್‌ಆನ್ ಶತಮಾನಗಳ ಹಿಂದೆ ಈ ರೀತಿ ಘೋಷಿಸಿದೆ:

"ಭೂಮಿಯಲ್ಲಿರುವ ಯಾವುದೇ ಜೀವಿಯೇ ಆಗಲಿ, ಅಥವಾ ಆಕಾಶದಲ್ಲಿ ತನ್ನೆರಡು ರೆಕ್ಕೆಗಳೊಂದಿಗೆ ಹಾರಾಡುವ ಯಾವುದೇ ಹಕ್ಕಿಯೇ ಆಗಲಿ, ಅವು ನಿಮ್ಮಂತಿರುವ ಸಮುದಾಯಗಳಲ್ಲದೆ ಇನ್ನೇನೂ ಅಲ್ಲ." (6/38)

ಪ್ರಾಣಿಗಳ ಹಕ್ಕು ಸಂರಕ್ಷಣೆಯ ಕುರಿತು ಇಸ್ಲಾಮ್ ಹದಿನಾಲ್ಕು ಶತಮಾನಗಳ ಹಿಂದೆಯೇ ಧ್ವನಿಯೆತ್ತಿದೆ. ದಯೆ,

ವಾತ್ಸಲ್ಯಗಳ ಕುರಿತು ಅತ್ಯಧಿಕ ಮಾತನಾಡುವ ಕ್ರೈಸ್ತಧರ್ಮಕ್ಕೆ ಪ್ರಾಣಿದಯೆಯ ಬಗ್ಗೆ ಒಂದು ಸ್ಪಷ್ಟ ನಿರ್ಧಾರ ಇಲ್ಲವೆಂದು ಆರ್ಥರ್ ಶೋಪನೋವರ್ (Arthur Schopenhauer) ತನ್ನ Religion: A Dialogue and Other Essays ಎಂಬ ಪುಸ್ತಕದಲ್ಲಿ (ಪುಟ 112) ಹೇಳಿದ್ದಾರೆ. ಪ್ರಾಣಿದಯೆಯ ಬಗ್ಗೆ ರೋಮ್‌ಗೂ ಕೂಡ ಒಂದು ಸ್ಪಷ್ಟ ನಿರ್ಧಾರವಿಲ್ಲವೆಂದು ಜೆ. ಪಾಸ್‌ಮೋರ್ (J. Passmore) ತನ್ನ The Treatment of Animals, Journal of the History of the Ideas ಎಂಬ ಪುಸ್ತಕದಲ್ಲಿ (ಪುಟ 203) ಹೇಳಿದ್ದಾರೆ.

19ನೇ ಶತಮಾನದಲ್ಲಿ ಒಂದೋ ಎರಡೋ ಚಿಂತಕರು ಪ್ರಾಣಿಗಳ ಹಕ್ಕು ಸಂರಕ್ಷಣೆಗಾಗಿ ಹೋರಾಡುತ್ತಿದ್ದರು ಎನ್ನುವುದನ್ನು ಬಿಟ್ಟರೆ ಪ್ರಾಣಿದಯೆಯನ್ನು ಗುರಿಯಾಗಿಟ್ಟು ಚಳುವಳಿಯು ಆರಂಭವಾದದ್ದು 1970ರಲ್ಲಾಗಿತ್ತೆಂ-

ದು ಪೀಟರ್ ಸಿಂಗರ್ (Peter Singer) ತನ್ನ Influence of Animals ಎಂಬ ಪುಸ್ತಕದಲ್ಲಿ ಹೇಳಿದ್ದಾರೆ.

ಇವೆಲ್ಲವುಗಳ ಹೊರತಾಗಿಯೂ ಮನುಷ್ಯ, ಪ್ರಾಣಿ, ಪಕ್ಷಿ, ಕೀಟಗಳನ್ನೊಳಗೊಂಡಂತೆ ಈ ಜಗತ್ತಿನಲ್ಲಿರುವ ಸರ್ವ ಜೀವರಾಶಿಗಳಿಗೂ ಕಾರುಣ್ಯದ ಪ್ರತೀಕವಾಗಿ ಬಂದಿದ್ದಾರೆ ಎಂದು ಕುರ್‌ಆನ್ ಪ್ರಶಂಸಿಸಿದ ಪ್ರವಾದಿ ಮುಹಮ್ಮದ್(ಸ) ರವರು ಜಗತ್ತಿನ ಇತಿಹಾಸದಲ್ಲಿ ಪ್ರಾಣಿಹಕ್ಕುಗಳ ಕುರಿತು ಧ್ವನಿಯೆತ್ತಿದ ಮೊಟ್ಟಮೊದಲ ವ್ಯಕ್ತಿಯಾಗಿದ್ದರು ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು.

ಪ್ರವಾದಿ ಮುಹಮ್ಮದ್(ಸ) ಹೇಳುತ್ತಾರೆ: “ನಾನು ಶಪಿಸಲು ಬಂದವನಲ್ಲ; ಅನುಕಂಪ ತೋರಲು ಬಂದವನು.” (ಮುಸ್ಲಿಮ್ 4/2006; ಹ. ನಂ. 2599)

ಇನ್ನೊಂದು ಸಲ ಅವರು ಹೇಳುತ್ತಾರೆ: “ನಿಮ್ಮನ್ನು ದಯೆ ತೋರುವುದಕ್ಕಾಗಿ ಕಳುಹಿಸಲಾಗಿದೆ. ಹಿಂಸಿಸುವುದಕ್ಕಾಗಿ

ಅಲ್ಲ." (ಅಲ್‌ಬುಖಾರಿ 1/89; ಹ. ನಂ. 217)

ಒಮ್ಮೆ ಅವರು ತಮ್ಮ ಶಿಷ್ಯರನ್ನು ಕರೆದು ಹೇಳಿದರು: "ಭೂಮಿಯಲ್ಲಿರುವವರ ಮೇಲೆ ದಯೆ ತೋರಿಸಿ. ಹಾಗಾದರೆ ಆಕಾಶದಲ್ಲಿರುವವನು (ಅಲ್ಲಾಹು) ನಿಮ್ಮ ಮೇಲೆ ದಯೆ ತೋರಿಸುತ್ತಾನೆ." (ಅಲ್‌ಮುಅಜಮುಲ್ ಕಬೀರ್ 10/149; ಹ. ನಂ. 10277)

ಪ್ರಾಣಿಗಳಿಗೂ ಆತ್ಮವಿದೆಯೆಂದು ಅವರು ತಮ್ಮ ಶಿಷ್ಯ-ರಿಗೆ ಕಲಿಸಿಕೊಟ್ಟರು. ಅರಬ್ಬರಲ್ಲಿ ಬಹಳ ಹಿಂದಿನಿಂದ-ಲೇ ಬಿಲ್ವಿದ್ಯೆಯನ್ನು ಕಲಿಯಲು ಪ್ರಾಣಿಯನ್ನು ಕಟ್ಟಿಹಾಕಿ ಅದನ್ನು ಗುರಿಯಾಗಿಟ್ಟು ಬಾಣ ಪ್ರಯೋಗಿಸುವ ಸಂಪ್ರ-ದಾಯವು ರೂಢಿಯಲ್ಲಿತ್ತು. ಆದರೆ ಪ್ರವಾದಿ ಮುಹಮ್ಮ-ದ್(ಸ) ಇದನ್ನು ಕಟುವಾಗಿ ವಿರೋಧಿಸಿದರು. (ಅಲ್‌ಬು-ಖಾರಿ 5/2100; ಹ. ನಂ. 5194) ಅವರು ಹೇಳಿದರು: "ಆತ್ಮವಿರುವ ಯಾವುದೇ ಜೀವಿಯನ್ನೂ ಬಿಲ್ವಿದ್ಯೆಗೆ ಗುರಿಯಾಗಿ ಮಾಡಕೂಡದು." (ಮುಸ್ಲಿಮ್ 3/1549;

ಹ. ನಂ. 1957). ಮಾತ್ರವಲ್ಲದೆ ಆ ರೀತಿ ಮಾಡುವವರನ್ನು ಅವರು ಕಠೋರವಾಗಿ ಶಪಿಸಿದರು. (ಅಲ್‌ಬುಖಾರಿ 5/2100; ಹ. ನಂ. 5196).

ಅವರು ಮದೀನಕ್ಕೆ ಬಂದಾಗ ಅಲ್ಲಿಯ ಜನರು ಆಡಿನ ಗುದಭಾಗವನ್ನು ಮತ್ತು ಒಂಟೆಯ ಡುಬ್ಬವನ್ನು ಅವು ಜೀವಂತವಿರುವಾಗಲೇ ಕತ್ತರಿಸಿ ತೆಗೆದು ಬೇಯಿಸಿ ತಿನ್ನುತ್ತಿದ್ದರು. ಪ್ರವಾದಿ ಮುಹಮ್ಮದ್(ಸ) ಇದನ್ನು ತೀಕ್ಷ್ಣವಾಗಿ ವಿರೋಧಿಸಿದರು. ಮಾತ್ರವಲ್ಲ, ಹಾಗೆ ಮಾಡುವವರನ್ನು ಶಪಿಸಿದರು ಕೂಡ. (ಅಲ್‌ಬುಖಾರಿ 5/2100; ಹ. ನಂ. 5197). ಅವರು ಹೇಳಿದರು: "ಪ್ರಾಣಿಯು ಜೀವಂತವಿರುವಾಗ ಅದರ ಅಂಗವನ್ನು ಕತ್ತರಿಸಬಾರದು. ಹಾಗೆ ಕತ್ತರಿಸಿದ ಭಾಗವು ಶವವಾಗಿದೆ. ಅದನ್ನು ನೀವು ತಿನ್ನಕೂಡದು." (ಅಲ್‌ಮುಸ್ತದ್ರಕ್ 4/137; ಹ. ನಂ. 7150)

ಕುದುರೆಯ ಜುಟ್ಟು, ದಾಡಿ ಮತ್ತು ಬಾಲಗಳನ್ನು ಕತ್ತರಿಸುವುದನ್ನು ಸಹ ಅವರು ವಿರೋಧಿಸಿದರು. (ಅಬೂ-

ದಾವೂದ್ 2/26; ಹ. ನಂ. 2542)

ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲಲು ಇಸ್ಲಾಮ್ ಅನುಮತಿ ನೀಡಿದೆ. ಆದರೆ ಆ ಸಂದರ್ಭದಲ್ಲೂ ಕೆಲವು ಶಿಷ್ಟಾಚಾರಗಳನ್ನು ಪಾಲಿಸುವಂತೆ ಅವರು ತಮ್ಮ ಶಿಷ್ಯರಿಗೆ ಆದೇಶಿಸಿದ್ದಾರೆ. ಅವರು ಹೇಳುತ್ತಾರೆ: "ನೀವು ಪ್ರಾಣಿಯನ್ನು ಕೊಯ್ಯುವಾಗ ಚೂರಿಯನ್ನು ಹರಿತಗೊಳಿಸಿರಿ." (ಮುಸ್ಲಿಮ್ 3/1548; ಹ. ನಂ. 1955). ಒಮ್ಮೆ ಅವರು ಒಂದು ದಾರಿಯ ಮೂಲಕ ಸಾಗುತ್ತಿದ್ದಾಗ ಒಬ್ಬ ವ್ಯಕ್ತಿ ಒಂದು ಕುರಿಯನ್ನು ಮಲಗಿಸಿ ಅದರ ಎದುರಲ್ಲೇ ತನ್ನ ಚೂರಿಯನ್ನು ಹರಿತ ಮಾಡುತ್ತಿರುವುದನ್ನು ಕಂಡರು. ಆಗ ಅವರು ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಾ ಕೇಳಿದರು: "ನೀನು ಈ ಪ್ರಾಣಿಯನ್ನು ಎರಡೆರಡು ಬಾರಿ ಕೊಲ್ಲಬೇಕೆಂದಿರುವೆಯಾ? ಅದನ್ನು ಮಲಗಿಸುವ ಮುಂಚೆ ನಿನಗೆ ಚೂರಿಯನ್ನು ಹರಿತಗೊಳಿಸಬಾರದೇ?" (ಅಲ್‌ಮುಸ್ತದ್ರಕ್ 4/257; ಹ. ನಂ. 7563).

ಪ್ರಾಣಿಗಳನ್ನು ಕಲ್ಲೆಸೆದು ಸಾಯಿಸುವುದನ್ನು ಅಥವಾ ಗಾಯಗೊಳಿಸುವುದನ್ನು ಅವರು ವಿರೋಧಿಸಿದರು. ಅದು ಚಿಕ್ಕ ಚಿಕ್ಕ ಕಲ್ಲುಗಳನ್ನು ಎಸೆಯುವ ಮೂಲಕವಾದರೂ ಸಹ. ಅವರು ಹೇಳಿದರು: "ಕಲ್ಲೆಸೆಯುವುದರಿಂದ ಬೇಟೆಯನ್ನು ಕೊಲ್ಲಲಾಗುವುದಿಲ್ಲ ಅಥವಾ ಶತ್ರುವನ್ನು ಓಡಿಸಲಾಗುವುದಿಲ್ಲ. ಆದರೆ ಅದರಿಂದ (ಪ್ರಾಣಿಗಳ) ಹಲ್ಲು ತುಂಡಾಗುವ ಅಥವಾ ಕಣ್ಣು ಕುರುಡಾಗುವ ಸಾಧ್ಯತೆಯಿದೆ." (ಮುಸ್ಲಿಮ್ 3/1548; ಹ. ನಂ. 1955).

ಪ್ರಾಣಿಗಳಿಗೆ ದಯೆ ತೋರಬೇಕಾದ ಪ್ರಾಮುಖ್ಯತೆಯ ಬಗ್ಗೆ ವಿವರಿಸುತ್ತಾ ಅವರು ತಮ್ಮ ಶಿಷ್ಯರಿಗೆ ಕೆಲವು ಉದಾಹರಣೆಗಳನ್ನು ಹೇಳಿಕೊಡುತ್ತಿದ್ದರು. ಒಮ್ಮೆ ಅವರು ಹೇಳಿದರು: "ಒಬ್ಬ ದಾರಿಹೋಕ ದಾಹದಿಂದ ಕಂಗಾಲಾಗಿ ನೀರನ್ನು ಹುಡುಕುತ್ತಿದ್ದ. ಆಗ ಅವನಿಗೆ ಒಂದು ಬಾವಿ ಕಂಡಿತು. ಆತ ಅದರೊಳಗೆ ಇಳಿದು ನೀರು ಕುಡಿದು ತನ್ನ ದಾಹವನ್ನು ಇಂಗಿಸಿದ. ಬಳಿಕ

ಆತ ಬಾವಿಯಿಂದ ಹೊರಬಂದಾಗ ಒಂದು ನಾಯಿ ದಾಹದಿಂದ ಬಳಲಿ ಮಣ್ಣು ನೆಕ್ಕುತ್ತಿರುವುದನ್ನು ಕಂಡ. ತಾನು ದಾಹದಿಂದ ಬಳಲಿದಂತೆಯೇ ಈ ನಾಯಿಯೂ ಬಳಲುತ್ತಿದೆ ಎಂದು ತಿಳಿದಾಗ ಆ ವ್ಯಕ್ತಿಗೆ ಅನುಕಂಪುಂ-ಟಾಯಿತು. ಆತ ಪುನಃ ಬಾವಿಗಿಳಿದು ತನ್ನ ಬೂಟಿನಲ್ಲಿ ನೀರು ತುಂಬಿಸಿ ತಂದು ನಾಯಿಯ ಬಾಯನ್ನು ಹಿಡಿದು ಅದಕ್ಕೆ ಕುಡಿಸಿದ. ಅವನ ಈ ಕೃತ್ಯವನ್ನು ಕಂಡು ಅಲ್ಲಾ-ಹನಿಗೆ ಸಂತೋಷವಾಯಿತು. ಅಲ್ಲಾಹು ಅವನ ಎಲ್ಲಾ ಪಾಪಗಳನ್ನು ಕ್ಷಮಿಸಿದ." ಈ ಕಥೆಯನ್ನು ತದೇಕಚಿತ್ತ-ದಿಂದ ಆಲಿಸುತ್ತಿದ್ದ ಶಿಷ್ಯರು ಆಶ್ಚರ್ಯದಿಂದ ಕೇಳಿದರು: "ಪ್ರವಾದಿಗಳೇ! ಪ್ರಾಣಿಗಳಿಗೆ ದಯೆ ತೋರಿದರೆ ನಮಗೆ ಪುಣ್ಯವಿದೆಯೇ?" ಆಗ ಅವರು ನಸುನಗುತ್ತಾ ಹೇಳಿದರು: "ಹೌದು. ಹಸಿ ಯಕೃತ್ತು ಇರುವ ಯಾವುದೇ ಜೀವಿಗೆ ದಯೆ ತೋರಿದರೂ ಅದರಲ್ಲಿ ನಿಮಗೆ ಪುಣ್ಯವಿ-ದೆ." (ಅಲ್‌ಬುಖಾರಿ 2/833; ಹ. ನಂ. 2234).

ಇನ್ನೊಮ್ಮೆ ಅವರು ತಮ್ಮ ಶಿಷ್ಯರಿಗೆ ಇನ್ನೊಂದು ಘಟನೆ ಹೇಳಿದರು: “ಒಂದು ನಾಯಿ ಸತ್ತುಹೋಗುವಷ್ಟು ದಾಹದಿಂದ ಒಂದು ಬಾವಿಗೆ ಗಿರಕಿ ಹೊಡೆಯುತ್ತಿತ್ತು. ಇದನ್ನು ಕಂಡ ಇಸ್ರೇಲ್ ಸಂತತಿಗಳಲ್ಲಿ ಸೇರಿದ ಒಬ್ಬ ವೇಶ್ಯೆ ತನ್ನ ಬೂಟನ್ನು ಕಳಚಿ ಅದರಲ್ಲಿ ಬಾವಿಯಿಂದ ನೀರು ತಂದು ಅದಕ್ಕೆ ಕುಡಿಸಿದಳು. ಆಗ ಅಲ್ಲಾಹು ಆಕೆಯ ಪಾಪಗಳನ್ನು ಕ್ಷಮಿಸಿದನು.” (ಅಲ್‌ಬುಖಾರಿ 3/1279; ಹ. ನಂ. 2234).

ಪ್ರವಾದಿ ಮುಹಮ್ಮದ್(ಸ) ರ ಶಿಷ್ಯ ಅನಸ್ ಬಿನ್ ಮಾಲಿಕ್ ಹೇಳುತ್ತಾರೆ: “ನಾವು ಯಾತ್ರೆಯಲ್ಲಿ ಒಂದು ಸ್ಥಳದಲ್ಲಿ ಬಿಡಾರ ಹೂಡಿದರೆ ನಮ್ಮ ಪ್ರಾಣಿಗಳಿಗೆ ಮೇವು ನೀಡುವ ತನಕ ನಮಾಝ್ ಮಾಡುತ್ತಿರಲಿಲ್ಲ.” (ಅಬೂ-ದಾವೂದ್ 2/28; ಹ. ನಂ. 2551)

ಪ್ರಾಣಿಗಳನ್ನು ಹಿಂಸಿಸುವುದನ್ನು ಪ್ರವಾದಿ ಮುಹಮ್ಮ-ದ್(ಸ) ರು ಕಟುವಾಗಿ ವಿರೋಧಿಸುತ್ತಿದ್ದರು. ಈ ಬಗ್ಗೆ

ಅವರು ತಮ್ಮ ಶಿಷ್ಯರಿಗೆ ಎಚ್ಚರಿಕೆ ನೀಡುತ್ತಿದ್ದರು. ಒಂದು ಬೆಕ್ಕನ್ನು ಸೆರೆಯಲ್ಲಿಟ್ಟು ಕೊಂದ ಮಹಿಳೆಯೊಬ್ಬಳು ನರಕಕ್ಕೆ ಹೋದ ಘಟನೆಯನ್ನು ವಿವರಿಸುತ್ತಾ ಅವರು ಹೇಳಿದರು: “ಆಕೆ ಆ ಬೆಕ್ಕಿಗೆ ತಾನಾಗಿ ಆಹಾರವನ್ನೂ ಕೊಡಲಿಲ್ಲ. ಅದು ಚಿಕ್ಕ ಜೀವಿಗಳನ್ನು ತಿಂದು ತನ್ನ ಹಸಿ-ವೆಯನ್ನು ಇಂಗಿಸಲೂ ಬಿಡಲಿಲ್ಲ.” (ಮುಸ್ಲಿಮ್ 4/1760; ಹ. ನಂ. 2242).

ಪ್ರಾಣಿಗಳ ಮುಖಕ್ಕೆ ಬಡಿಯುವುದನ್ನು ಮತ್ತು ಮುಖಕ್ಕೆ ಬರೆ ಹಾಕುವುದನ್ನು ಅವರು ಕಠಿಣವಾಗಿ ವಿರೋಧಿಸಿ-ದರು (ಮುಸ್ಲಿಮ್ 3/1673; ಹ. ನಂ. 2116). ಮುಖಕ್ಕೆ ಬರೆ ಹಾಕಲಾದ ಕತ್ತೆಯೊಂದನ್ನು ಕಂಡಾಗ ಅವರು ಬಹಳ ಕೋಪದಿಂದಲೇ ಹೇಳಿದರು: “ಇದಕ್ಕೆ ಬರೆ ಹಾ-ಕಿದವನನ್ನು ಅಲ್ಲಾಹು ಶಪಿಸಲಿ.” (ಮುಸ್ಲಿಮ್ 3/1673; ಹ. ನಂ. 2117).

ಇರುವೆ, ಜೇನ್ನೊಣ ಮುಂತಾದ ಸಣ್ಣ ನಿರುಪದ್ರವಿ ಜೀ-

ವಿಗಳನ್ನು ಕೊಲ್ಲುವುದನ್ನು ಅವರು ವಿರೋಧಿಸಿದರು. (ಅಬೂದಾವೂದ್ 2/789; ಹ. ನಂ. 5267). ಇರುವೆ ಕಚ್ಚಿದ ಕಾರಣ ಇಡೀ ಇರುವೆಗೂಡನ್ನೇ ನಾಶ ಮಾಡಿದ ಒಬ್ಬ ಪ್ರವಾದಿಯನ್ನು ಅಲ್ಲಾಹು ಗದರಿಸಿದ ಘಟನೆಯನ್ನು ಶಿಷ್ಯರಿಗೆ ಹೇಳುತ್ತಾ ಅವರು ಶಿಷ್ಯರಲ್ಲಿ ಪ್ರಾಣಿದಯೆಯನ್ನು ಜಾಗ್ರತಗೊಳಿಸುತ್ತಿದ್ದರು. (ಅಲ್‌ಬುಖಾರಿ 3/1206; ಹ. ನಂ. 3141).

ಒಮ್ಮೆ ಅವರು ಒಂದು ಇರುವೆ ಗೂಡು ಬೆಂಕಿಯಿಂದ ಸುಟ್ಟಿರುವುದನ್ನು ಕಂಡರು. ಅವರು ತಮ್ಮ ಶಿಷ್ಯರಲ್ಲಿ ಕೇಳಿದರು: "ಈ ಇರುವೆಗೂಡನ್ನು ಸುಟ್ಟದ್ದು ಯಾರು?" ಶಿಷ್ಯರು ಹೇಳಿದರು: "ಪ್ರವಾದಿಗಳೇ, ನಾವೇ ಅದನ್ನು ಸುಟ್ಟದ್ದು." ಆಗ ಅವರು ಹೇಳಿದರು: "ಬೆಂಕಿಹಚ್ಚಿ ಶಿಕ್ಷೆ ನೀಡುವ ಅಧಿಕಾರ ನಿಮಗಿಲ್ಲ. ಆ ಅಧಿಕಾರ ಇರುವುದು ಬೆಂಕಿಯ ಒಡೆಯನಿಗೆ (ಅಲ್ಲಾಹನಿಗೆ) ಮಾತ್ರ." (ಅಬೂದಾವೂದ್ 2/61; ಹ. ನಂ. 2675).

ಅವರು ಒಮ್ಮೆ ಹೇಳಿದರು: “ಹಕ್ಕಿಗಳನ್ನು ಗೂಡಿನಲ್ಲಿ ಅವುಗಳ ಪಾಡಿಗೆ ಬಿಟ್ಟುಬಿಡಿ.” (ಅಬೂದಾವೂದ್ 2/116; ಹ. ನಂ. 2835). ಅವರ ಶಿಷ್ಯರಲ್ಲೊಬ್ಬರಾದ ಇಬ್ನ್ ಮಸ್‌ಊದ್ ಹೇಳುತ್ತಾರೆ: ಒಮ್ಮೆ ನಾವು ಪ್ರವಾದಿಯವರೊಂದಿಗೆ ಪ್ರಯಾಣ ಮಾಡುತ್ತಿದ್ದೆವು. ಪ್ರಯಾಣದ ಮಧ್ಯೆ ಪ್ರವಾದಿಯವರು ತಮ್ಮ ಪ್ರಕೃತಿ ಬಯಕೆ ತೀರಿಸಲು ನಮ್ಮಿಂದ ದೂರ ಸಾಗಿದಾಗ ನಾವು ಮರದ ಮೇಲೆ ಒಂದು ಹಕ್ಕಿ ಮತ್ತು ಅದರ ಎರಡು ಮರಿಗಳನ್ನು ಕಂಡೆವು. ನಾವು ಹಕ್ಕಿ ಮರಿಗಳನ್ನು ಹಿಡಿದೆವು. ಆಗ ತಾಯಿ ಹಕ್ಕಿ ರೆಕ್ಕೆ ಬಡಿಯುತ್ತಾ ವಿಲಕ್ಷಣವಾಗಿ ವರ್ತಿಸತೊಡಗಿತು. ಪ್ರವಾದಿಯವರು ಬಂದು ಇದನ್ನು ಕಂಡಾಗ ಕೇಳಿದರು: “ಈ ತಾಯಿಗೆ ತೊಂದರೆ ಕೊಟ್ಟದ್ದು ಯಾರು? ಅದರ ಮರಿಗಳನ್ನು ಅದಕ್ಕೆ ವಾಪಸು ಕೊಡಿ.” (ಅಬೂದಾವೂದ್ 2/61; ಹ. ನಂ. 2675).

ಅವರೊಮ್ಮೆ ಹೇಳಿದರು: “ನೀವು ಹುಂಜವನ್ನು ಶಪಿಸ-

ಬಾರದು. ಅದು ನಿಮ್ಮನ್ನು ನಮಾಝ್‌ಗಾಗಿ ಎಬ್ಬಿಸು-ತ್ತದೆ." (ಅಬೂದಾವೂದ್ 2/748; ಹ. ನಂ. 5101).

ಮದೀನ ನಿವಾಸಿಗಳಲ್ಲಿ ಸೇರಿದ ಒಬ್ಬ ಮಹಿಳೆ ಪ್ರವಾದಿ ಮುಹಮ್ಮದ್(ಸ) ರ ಜೊತೆಗೆ ಪ್ರಯಾಣ ಮಾಡು-ತ್ತಿದ್ದಳು. ತನ್ನ ಒಂಟೆ ನಿಧಾನವಾಗಿ ಸಾಗುವುದನ್ನು ಕಂಡು ಆಕೆ ಕೋಪದಿಂದ ಅದನ್ನು ಶಪಿಸುತ್ತಿದ್ದಳು. ಇದನ್ನು ಕೇಳಿ ಪ್ರವಾದಿ ಮುಹಮ್ಮದ್(ಸ) ಹೇಳಿದರು: "ಅದರ ಮೇಲಿರುವ ನಿನ್ನ ಸರಂಜಾಮುಗಳನ್ನು ತೆಗೆದು ಅದನ್ನು ಅದರ ಪಾಡಿಗೆ ಬಿಟ್ಟುಬಿಡು. ಅದು ಶಾಪಕ್ಕೊ-ಳಗಾಗಿದೆ." ಇನ್ನೊಂದು ವರದಿಯಲ್ಲಿ ಹೀಗಿದೆ: "ಶಾಪಕ್ಕೆ ತುತ್ತಾದ ಪ್ರಾಣಿ ನಮ್ಮ ಜೊತೆಗಿರಬಾರದು." (ಮುಸ್ಲಿಮ್ 4/2004; ಹ. ನಂ. 2595). ಈ ಮಾತನ್ನು ವಿವರಿಸುತ್ತಾ ಪ್ರಸಿದ್ಧ ವಿದ್ವಾಂಸರಾದ ಅನ್ನವವೀ ಹೇಳುತ್ತಾರೆ: "ಪ್ರ-ವಾದಿಯವರು ಆಕೆಯನ್ನು ಗದರಿಸುವುದಕ್ಕಾಗಿ ಹೀಗೆ ಹೇಳಿದರು. ಏಕೆಂದರೆ ಪ್ರಾಣಿಗಳನ್ನು ಶಪಿಸುವುದನ್ನು

ಅವರು ವಿರೋಧಿಸಿದ್ದಾರೆ. ಆ ಒಂಟೆಯನ್ನು ಶಪಿಸಿದ ಕಾರಣ ಅದರ ಮೇಲೆ ಸವಾರಿ ಮಾಡದೆ ಅದರಷ್ಟಕ್ಕೆ ತೊರೆಯುವ ಮೂಲಕ ಅವರು ಆಕೆಗೆ ಶಿಕ್ಷೆ ನೀಡಿದ್ದಾರೆ." (ಶರ್ಹ್ ನ್ನವವೀ 16/147)

ಅವರೊಮ್ಮೆ ಹೇಳಿದರು: "ನೀವು ಹುಲ್ಲುಗಾವಲುಗಳ ಮೂಲಕ ಪ್ರಯಾಣ ಮಾಡುವಾಗ ಒಂಟೆಗೆ ಭೂಮಿಯಲ್ಲಿರುವ ಅದರ ಪಾಲನ್ನು ನೀಡಿರಿ (ಅಂದರೆ ಅವುಗಳನ್ನು ಮೇಯಲು ಬಿಡಿ). ಬರಪೀಡಿತ ಪ್ರದೇಶಗಳ ಮೂಲಕ ಪ್ರಯಾಣ ಮಾಡುವಾಗ ವೇಗವಾಗಿ ಸಾಗಿರಿ (ಅಂದರೆ ನಿಧಾನ ಮಾಡುವ ಮೂಲಕ ಒಂಟೆಯನ್ನು ಆಯಾಸಗೊಳಿಸಬೇಡಿ)." (ಮುಸ್ಲಿಮ್ 3/1525; ಹ. ನಂ. 1926).

ಆಹಾರವಿಲ್ಲದೆ ಬಳಲಿ ಹೊಟ್ಟೆಯು ಬೆನ್ನಿನೊಂದಿಗೆ ಅಂಟಿಹೋಗಿದ್ದ ಒಂದು ಒಂಟೆಯನ್ನು ಕಂಡಾಗ ಅವರು ಅದರ ಯಜಮಾನನ್ನು ಕರೆದು ಹೇಳಿದರು: "ಈ ಮೂಕ ಪ್ರಾಣಿಯ ವಿಷಯದಲ್ಲಿ ಅಲ್ಲಾಹನನ್ನು ಭಯಪಡು.

ಅದನ್ನು ಉತ್ತಮ ರೀತಿಯಲ್ಲಿ ಸಾಕು ಅಥವಾ ಉತ್ತಮ ರೀತಿಯಲ್ಲಿ ಕೊಂದು ತಿಂದುಬಿಡು." (ಅಬೂದಾವೂದ್ 2/27; ಹ. ನಂ. 2548). ಅಂದರೆ ಆ ಪ್ರಾಣಿಯನ್ನು ಉಪವಾಸ ಕೆಡವಿ ನಿತ್ಯ ಸಾಯಿಸುವುದರಿಂದ ಅದನ್ನು ಒಮ್ಮೆಲೆ ಕೊಂದು ತಿನ್ನುವುದು ಉತ್ತಮವಾಗಿದೆ.

ಒಮ್ಮೆ ಅವರು ಒಂದು ದಾರಿಯ ಮೂಲಕ ಸಾಗುತ್ತಿದ್ದಾಗ ಒಂದು ಒಂಟೆಯನ್ನು ಕಂಡರು. ಅವರನ್ನು ಕಂಡು ಆ ಒಂಟೆಯ ಕಣ್ಣಿಂದ ಕಣ್ಣೀರು ಹರಿಯತೊಡಗಿತು. ಅವರು ಅದರ ಹತ್ತಿರ ಹೋಗಿ ಅದರ ಕಣ್ಣೀರನ್ನು ಒರೆಸಿ ತಲೆಯನ್ನು ಸವರುತ್ತಾ ಅಲ್ಲಿದ್ದ ಜನರೊಂದಿಗೆ ಕೇಳಿದರು: "ಈ ಒಂಟೆಯ ಯಜಮಾನ ಯಾರು? ಈ ಒಂಟೆ ಯಾರದ್ದು?" ಆಗ ಮದೀನಾ ನಿವಾಸಿಗಳ ಪೈಕಿ ಒಬ್ಬ ಯುವಕ ಮುಂದೆ ಬಂದು ಅದು ತನ್ನದೆಂದನು. ಆಗ ಅವರು ಅವನೊಂದಿಗೆ ಹೇಳಿದರು: "ಅಲ್ಲಾಹು ನಿನ್ನ ನಿಯಂತ್ರಣಕ್ಕೆ ಕೊಟ್ಟಿರುವ ಈ ಮೂಕ ಪ್ರಾಣಿಯ

ವಿಷಯದಲ್ಲಿ ನೀನು ಅಲ್ಲಾಹನನ್ನು ಭಯಪಡುವುದಿಲ್ಲವೇ? ನೀನದಕ್ಕೆ ತಿನ್ನಲು ಕೊಡದೆ ಉಪವಾಸ ಹಾಕುತ್ತಿದ್ದಿ ಮತ್ತು ಅದರ ಮೇಲೆ ಅದಕ್ಕೆ ಹೊರಲಾಗದ ಭಾರವನ್ನು ಹೊರಿಸುತ್ತಿದ್ದಿ ಎಂದು ಅದು ನನ್ನೊಂದಿಗೆ ಅಳಲು ತೋಡಿಕೊಳ್ಳುತ್ತಿದೆ." (ಅಬೂದಾವೂದ್ 2/27; ಹ. ನಂ. 2549)

ಅವರೊಮ್ಮೆ ಹೇಳಿದರು: "ಜನರು ಝಕಾತ್ (ಕಡ್ಡಾಯದಾನ) ನೀಡುವುದನ್ನು ನಿಲ್ಲಿಸಿದರೆ ಆಕಾಶದಿಂದ ಮಳೆ ಸುರಿಯುವುದು ನಿಲ್ಲುತ್ತದೆ. ಒಂದು ವೇಳೆ ಪ್ರಾಣಿಗಳಿಲ್ಲದಿರುತ್ತಿದ್ದರೆ ಜನರಿಗೆ ಮಳೆಯೇ ದೊರೆಯುತ್ತಿರಲಿಲ್ಲ." (ಇಬ್ನ್ ಮಾಜ 2/1332; ಹ. ನಂ. 4019)

ಅವರು ಹೇಳಿದರು: "ಮುಸಲ್ಮಾನರಲ್ಲಿ ಯಾರಾದರೂ ಒಂದು ಗಿಡ ನೆಟ್ಟು ಅದರಿಂದ ಮನುಷ್ಯರು ಅಥವಾ ಪ್ರಾಣಿಗಳು ಏನಾದರೂ ತಿಂದರೆ ಆ ಗಿಡ ನೆಟ್ಟವನಿಗೆ ಅದರ ಪುಣ್ಯವಿದೆ." (ಬುಖಾರಿ 5/2239; ಹ. ನಂ.

5666). ಇನ್ನೊಂದು ವರದಿಯಲ್ಲಿ ಹೀಗಿದೆ: “ಮುಸ್ಲಿಮನರಲ್ಲಿ ಯಾರಾದರೂ ಒಂದು ಗಿಡವನ್ನು ನೆಟ್ಟು, ಅದರಿಂದ ಏನನ್ನು ತಿನ್ನಲಾಗುತ್ತದೋ ಅದು ಅವನಿಗೆ ಪುಣ್ಯವಾಗಿದೆ. ಅದರಿಂದ ಏನನ್ನು ಕದಿಯಲಾಗುತ್ತದೋ ಅದು ಅವನಿಗೆ ಪುಣ್ಯವಾಗಿದೆ. ಅದರಿಂದ ವನ್ಯಪ್ರಾಣಿಗಳು ಏನನ್ನು ತಿನ್ನುತ್ತವೆಯೋ ಅದು ಅವನಿಗೆ ಪುಣ್ಯವಾಗಿದೆ. ಅದರಿಂದ ಹಕ್ಕಿಗಳು ಏನನ್ನು ತಿನ್ನುತ್ತವೆಯೋ ಅದು ಅವನಿಗೆ ಪುಣ್ಯವಾಗಿದೆ. ಅದರಿಂದ ಏನನ್ನು ತೆಗೆಯಲಾಗುತ್ತದೋ ಅದೆಲ್ಲ ಅವನಿಗೆ ಪುಣ್ಯವಾಗಿದೆ.” (ಮುಸ್ಲಿಮ್ 3/1188; ಹ. ನಂ. 1552).

ಪ್ರವಾದಿ ಮುಹಮ್ಮದ್(ಸ) ಹತ್ತು ಸಾವಿರ ಸೈನಿಕರಿರುವ ದೊಡ್ಡ ಸೇನೆಯೊಂದಿಗೆ ಮಕ್ಕಾ ವಶಪಡಿಸಲು ಹೋದಾಗ ದಾರಿ ಮಧ್ಯೆ ಒಂದು ನಾಯಿ ತನ್ನ ನವಜಾತ ಮರಿಗಳೊಂದಿಗೆ ಮಲಗಿರುವುದನ್ನು ಕಂಡರು. ಆ ನಾಯಿ ಮತ್ತು ಅದರ ಮರಿಗಳಿಗೆ ಸೈನಿಕರಲ್ಲಿ ಯಾರೂ

ಕಲ್ಲೆಸೆಯಬಾರದೆಂದು ಅವರು ಜುಐಲ್ ಬಿನ್ ಸುರಾಕ ಎಂಬ ಸೈನಿಕನನ್ನು ಸೈನ್ಯವು ದಾಟಿ ಹೋಗುವ ತನಕ ಆ ನಾಯಿ ಮತ್ತು ಅದರ ಮರಿಗಳಿಗೆ ಕಾವಲಾಗಿ ನಿಲ್ಲಿಸಿದರು. (ಮಗಾಝೀ ಅಲ್‌ವಾಕಿದೀ 1/804)

ಪ್ರಾಣಿಗಳೊಂದಿಗೆ ಪ್ರವಾದಿ ಮುಹಮ್ಮದ್(ಸ) ರಿಗೆ ಇದ್ದ ದಯೆ, ಕರುಣೆ, ಪ್ರೀತಿ ಮತ್ತು ಅವುಗಳ ಹಕ್ಕು ರಕ್ಷಣೆಗೆ ಅವರು ಕೈಗೊಂಡ ಕ್ರಮಗಳ ಬಗ್ಗೆ ಇದೊಂದು ಸಂಕ್ಷಿಪ್ತ ವಿವರಣೆಯಾಗಿದೆ. ಇಂತಹ ಇನ್ನೂ ಅದೆಷ್ಟೋ ಘಟನೆಗಳನ್ನು ಅವರ ಜೀವನದಿಂದ ಉದಾಹರಣೆಯಾಗಿ ನೀಡಬಹುದಾಗಿದೆ.

ಪ್ರಾಣಿಹಕ್ಕುಗಳ ರಕ್ಷಣೆಯ ಬಗ್ಗೆ ಪ್ರವಾದಿ ಮುಹಮ್ಮದ್(ಸ) ರ ನಿಲುವು ಸಮಗ್ರವೂ ಸಮರ್ಪಕವೂ ಆಗಿದೆ. ಇಂದಿನ ಕೆಲವು ಪ್ರಾಣಿದಯಾ ಸಂಘಗಳಂತೆ ಪ್ರಚಾರಕ್ಕಾಗಿ ಅಥವಾ ಪ್ರಸಿದ್ಧಿಗಾಗಿ ಅವರು ಆ ನಿಲುವುಗಳನ್ನು ಕೈಗೊಂಡಿರಲಿಲ್ಲ ಎಂದು ನಿಷ್ಪಕ್ಷವಾಗಿ ಚಿಂತಿಸುವವರಿಗೆ

ಖಂಡಿತ ಮನದಟ್ಟಾಗುತ್ತದೆ.

ಪ್ರವಾದಿಯ ಪ್ರಾಣಿದಯೆಯ ಕುರಿತು ಪಾಶ್ಚಾತ್ಯರಲ್ಲಿ ಅನೇಕ ಮಂದಿ ಮುಕ್ತವಾಗಿ ಶ್ಲಾಘಿಸಿದ್ದಾರೆ.

ಬಾಸ್‌ವರ್ಥ್ ಸ್ಮಿತ್ (Bosworth Smith) ಹೇಳುತ್ತಾರೆ: "ಪ್ರಾಣಿ ಹಕ್ಕುಗಳಿಗೆ ತನ್ನ ಅಧಿಕೃತ ಪ್ರಮಾಣಗಳಲ್ಲಿ ಉನ್ನತ ಸ್ಥಾನವನ್ನು ನೀಡಿ ದಾಖಲಿಸಿ, ಅವುಗಳನ್ನು ಕಾರ್ಯರೂಪಕ್ಕಿಳಿಸಿ ತೋರಿಸಿದ ಬೇರೊಂದು ಧರ್ಮವಿಲ್ಲ. ಮುಹಮ್ಮದ್‌ರವರ ಧರ್ಮದ ಹೊರತು." (Muhammad and Muhammadanism, Smith Elder & Co., London, 1874, p. 178)

ಅವರು ಮುಂದುವರಿದು ಹೇಳುತ್ತಾರೆ: "ಇದು ಪ್ರಾಣಿಗಳಿಗೆ ಇಸ್ಲಾಮ್ ನೀಡಿದ ಪರಿಗಣನೆಯಾಗಿದೆ. ಮುಸ್ಲಿಮ್ ಜಗತ್ತಿನಲ್ಲಿ ಪ್ರಾಣಿಗಳನ್ನು ಅತ್ಯಂತ ದಯೆಯಿಂದ ಮತ್ತು ಪ್ರೀತಿಯಿಂದ ಕಾಣುವುದಕ್ಕೆ ಈ ಇಸ್ಲಾಮಿಕ ಬೋಧನೆ-

ಗಳೂ ಒಂದು ಕಾರಣವಾಗಿದೆ." (ಅದೇ ಪುಸ್ತಕ ಪುಟ 180)

ಇಸ್ಲಾಮಿನ ಕಟು ವಿಮರ್ಶಕರು ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಅರೇಬಿಕ್ ಪ್ರಾಧ್ಯಾಪಕರು ಆಗಿರುವ ಡೇವಿಡ್ ಸ್ಮಿತ್ ಮಾರ್ಗೋಲಿಯತ್ (David Smith Margoliouth) ಹೇಳುತ್ತಾರೆ: "ಪ್ರವಾದಿಯವರು ಸಣ್ಣ ಸಣ್ಣ ಜೀವಿಗಳೊಂದಿಗೂ ತಮ್ಮ ಮಾನವೀಯತೆಯನ್ನು ಮೆರೆದಿದ್ದಾರೆ. ಆತ್ಮವಿರುವ ಪ್ರಾಣಿಗಳನ್ನು ಬಿಲ್ವಿದ್ಯೆಗೆ ಗುರಿಯಾಗಿ ಮಾಡುವುದನ್ನು ಅವರು ವಿರೋಧಿಸಿದರು. ತನ್ನ ಅನುಯಾಯಿಗಳ ಪೈಕಿ ಕೆಲವರು ಇರುವೆ ಗೂಡೊಂದಕ್ಕೆ ಬೆಂಕಿ ಹಚ್ಚಿದಾಗ ಅದನ್ನು ನಂದಿಸಲು ಆದೇಶಿಸಿದರು." (Mohammad and the Rise of Islam, London, Reprinted by Voice of India, New Delhi, 1998, p. 14-15)

ಪ್ರವಾದಿಚರಿತ್ರೆಯನ್ನು ಅಧ್ಯಯನ ಮಾಡಿದ ನಂತರ

ಕ್ಯಾರೆನ್ ಆರ್ಮ್‌ಸ್ಟ್ರಾಂಗ್ (Karen Armstrong) ಹೇಳುತ್ತಾರೆ: "ನಾವು ಪಾಶ್ಚಾತ್ಯರು ಶತಮಾನಗಳಿಂದ ಮುಹಮ್ಮದ್‌ರನ್ನು ನೀಚ, ಕ್ರೂರ ಹೋರಾಟಗಾರ, ಚಾಣಾಕ್ಷ ರಾಜಕಾರಣಿ ಎಂದು ಭಾವಿಸುತ್ತಿದ್ದೆವು. ಆದರೆ ಅವರಿಗೆ ದಯೆ ತುಂಬಿದ ಮನಸ್ಸಿದೆ. ಅವರು ಪ್ರಾಣಿಗಳನ್ನು ಪ್ರೀತಿಸಿದರು. ಮಲಗಿದ್ದ ಒಂದು ಬೆಕ್ಕನ್ನು ಎಬ್ಬಿಸಲು ಅವರು ಇಷ್ಟಪಡಲಿಲ್ಲ. ಒಂದು ಸಮುದಾಯದ ಮಹಾತ್ಮೆಯು ಜೀವರಾಶಿಗಳೊಂದಿಗೆ ಇರುವ ಅದರ ನಿಲುವನ್ನು ಅವಲಂಬಿಸಿದೆ ಎಂದು ಹೇಳಲಾಗುತ್ತದೆ." (Muhammad, Victor Gollanz, London, 1995, p. 230)

ಅವರು ಮುಂದುವರಿದು ಹೇಳುತ್ತಾರೆ: "ಇಸ್ಲಾಮೀ ಪೂರ್ವಕಾಲದಲ್ಲಿ ಅರಬ್ಬರು ಪ್ರಾಣಿಗಳೊಂದಿಗೆ ಕ್ರೂರವಾಗಿ ವರ್ತಿಸುತ್ತಿದ್ದರು. ಪ್ರಾಣಿಯು ಜೀವಂತವಿರುವಾಗಲೇ ಅದರ ಅಂಗಾಂಗಗಳನ್ನು ಕತ್ತರಿಸಿ ತಿನ್ನುತ್ತಿದ್ದರು.

ಅವುಗಳ ಮುಖಕ್ಕೆ ಬರೆಹಾಕುತ್ತಿದ್ದರು. ಅವುಗಳನ್ನು ಪರಸ್ಪರ ಹೊಡೆದಾಡಿಸಿ ನಗುತ್ತಿದ್ದರು. ಮುಹಮ್ಮದ್ ಇವೆಲ್ಲವನ್ನೂ ವಿರೋಧಿಸಿದರು. ಒಂದು ನಾಯಿಗೆ ದಾಹಜಲ ನೀಡಿದ ಕಾರಣಕ್ಕೆ ಸ್ವರ್ಗ ಮತ್ತು ಒಂದು ಬೆಕ್ಕನ್ನು ಹಿಂಸಿಸಿ ಕೊಂದ ಪಾಪಕ್ಕೆ ನರಕ ಸಿಗುತ್ತದೆಂದು ಅವರು ಹೇಳಿದ್ದಾಗಿ ವರದಿಯಾಗಿದೆ. ಈ ಹದೀಸ್‌ಗಳನ್ನು ಅವರ ಅನುಯಾಯಿಗಳು ದಾಖಲಿಸಿದ್ದಾರೆ ಎಂಬುದು, ಅವರು ಅದೆಷ್ಟು ಬೇಗ ಒಂದು ಮಾನವೀಯ ಮುಖದೆಡೆಗೆ ಪರಿವರ್ತನೆಗೊಂಡರು ಎಂಬುದಕ್ಕೆ ಪುರಾವೆಯಾಗಿದೆ." (ಅದೇ ಪುಸ್ತಕ ಪುಟ 231)

الحركة النصيحة الإسلامية
ANNASEEHA ISLAMIC MOVEMENT
SURATKAL, MANGALORE - 575 014
MOB: 9731593091 / 9945171612

Jamiyathe Ahle Hadees
Mangalore